


# ಕೇರಳ ಫೈಲ್ಸ್ ವಿವಾದದ ಸುತ್ತ

‘ಕೇರಳ ಫೈಲ್ಸ್ 2’ ಸಿನಿಮಾ ಕುರಿತು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರೇ ಈ ಬಾರಿ ದನಿ ಎತ್ತಿದ್ದಾರೆ. ಸಿಪಿಎಂ ಪಕ್ಷದ ಸಂಸದರು ಕೆಂಡಾಮಂಡಲವಾಗಿದ್ದಾರೆ. ಕೇರಳದ ನಿಜವಾದ ಮಾನವೀಯ ಸ್ವರೂಪವನ್ನು ಹಾಳುಗೆಡಹುವ ಅಜೆಂಡಾ ಸಿನಿಮಾ ಅದು ಎನ್ನುವುದು ಅವರೆಲ್ಲರ ದೂರು. ಸಂಸದ ಶಶಿ ತರೂರ್ ಒಂದು ಪುಟ್ಟ ಕಥೆಯನ್ನು ಇತ್ತೀಚೆಗೆ ಹೇಳಿದರು. ‘ಹಿಂದೆ ಸಿನಿಮಾ ವಸ್ತುಗಳು ಹೇಗಿರುತ್ತಿದ್ದವು ಎಂದರೆ ಒಂದೇ ಮನೆಯ ಮೂರು ಮಕ್ಕಳು ಬೇರೆ ಬೇರೆಯಾಗಿ ಭಿನ್ನ ಧರ್ಮದವರ ಮನೆಯಲ್ಲಿ ಬೆಳೆಯುತ್ತಾರೆ. ಒಳಿತು, ಕೆಡುಕುಗಳ ಬಗೆ ಬಗೆಯ ಮಾರ್ಗಗಳಲ್ಲಿ ನಡೆದರೂ ಕೊನೆಗೆ ಎಲ್ಲರೂ ಒಂದಾಗಿ ಕೆಟ್ಟದ್ದರ ಅಥವಾ ದುರುಳರ ವಿರುದ್ಧ ಹೋರಾಡುತ್ತಾರೆ. ಇಂತಹ ಕಥೆಗಳ ಸಿನಿಮಾಗಳನ್ನು ಜನರ ಸಾಂಸ್ಕೃತಿಕ, ಭಾವನಾತ್ಮಕ ಮನಸ್ಥಿತಿಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡೇ ಹೆಣೆಯಲಾಗುತ್ತಿತ್ತು. ‘ಕೇರಳ ಸ್ಟೋರಿ 2’ ಸಿನಿಮಾ ಉದ್ದೇಶ ಬೇರೆಯದೇ ಆಗಿದೆ. ರಾಜ್ಯದ ಅಸ್ಮಿತೆಯನ್ನೇ ಅದು ಹಾಳುಗೆಡಹಿ ತೋರುವ ಉದ್ದೇಶ ಹೊಂದಿದೆ’ ಎಂದು ತರೂರ್ ಆಕ್ಷೇಪಿಸಿದ್ದಾರೆ.

‘ಕೇರಳ ಸ್ಟೋರಿ 2’ ಸಿನಿಮಾದ ಟ್ರೈಲರ್ ಬಿಡುಗಡೆಯಾದ ಮೇಲೆ ಅದರಲ್ಲಿನ ಒಂದು ದೃಶ್ಯ ಸಾಮಾಜಿಕ ಮಾಧ್ಯಮದಲ್ಲಿ ಮೀಮ್‌ಗಳು ಹರಿದಾಡಲು ಕಾರಣವಾಗಿದೆ. ದನದ ಮಾಂಸದ ಆಹಾರವನ್ನು ತಟ್ಟೆಯಲ್ಲಿ ಇಟ್ಟು ಮಹಿಳೆಗೆ ಕೊಟ್ಟು, ತಿನ್ನುವಂತೆ ಬಲವಂತ ಮಾಡುವ ದೃಶ್ಯ ಅದು. ಉಪವಾಸ ಇದ್ದರೂ ಸರಿಯೇ, ಆ ಆಹಾರ ತಿನ್ನುವುದಿಲ್ಲ ಎಂದು ಮಹಿಳೆ ಪ್ರತಿಭಟಿಸುವ ಸನ್ನಿವೇಶ ಅದರಲ್ಲಿ ಇದೆ. ಇದನ್ನು ನೋಡಿದ ಮೇಲೆ ಕೆಲವರು ದನದ ಮಾಂಸದ ಆಹಾರ ಇರುವ ತಟ್ಟೆಗಳನ್ನು ಹಿಡಿದು ಫೋಟೊ ಕ್ಲಿಕ್ಕಿಸಿ, ಸಾಮಾಜಿಕ ಮಾಧ್ಯಮದಲ್ಲಿ ಹಾಕಿದ್ದಾರೆ.

ಮುಸ್ಲಿಮರನ್ನು ಬೇಕೆಂದೇ ಕೆಟ್ಟದಾಗಿ ಚಿತ್ರಿಸುವ ದುರುದ್ದೇಶದ ಸಿನಿಮಾ ಇದು ಎನ್ನುವುದು ಟೀಕೆ ವ್ಯಕ್ತಪಡಿಸಿದ ಬಹುತೇಕರ ಅಭಿಪ್ರಾಯ. ಅದಕ್ಕೆಂದೇ ಪ್ರಕರಣ ಕೋರ್ಟ್ ಕಟಕಟೆಯನ್ನೂ ಏರಿತ್ತು. ಶ್ರೀದೇವ ನಂಬೂದಿರಿ ಎಂಬುವರು ಪ್ರಕರಣ ದಾಖಲಿಸಿದ್ದರು. ಸೆನ್ಸಾರ್ ಮಂಡಳಿ ಹಾಗೂ ಚಿತ್ರ ನಿರ್ಮಾಣ ಮಾಡಿರುವ ತಂಡಗಳಿಗೆ ಕೇರಳ ಹೈಕೋರ್ಟ್ ನೋಟಿಸ್ ಕೂಡ ನೀಡಿ, ವಿವರಣೆ ಕೇಳಿತು. ಫೆಬ್ರುವರಿ 24ಕ್ಕೆ ವಿಚಾರಣೆ ನಡೆಯಲಿದೆ ಎಂದಿತು. ವಿಚಾರಣೆ ಮುಗಿದ ನಂತರ ಸಿನಿಮಾ ಯಾವಾಗ ತೆರೆ ಕಾಣಬಹುದು ಎಂಬುದು ಗೊತ್ತಾಗಲಿದೆ.

ಕೇರಳ ವಿಧಾನಸಭಾ ಚುನಾವಣೆ ಏಪ್ರಿಲ್‌ನಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ಇಂತಹ ಸಿನಿಮಾ ದೇಶದ ಜನರಲ್ಲಿ ರಾಜ್ಯವೊಂದರ ಕುರಿತು ದ್ವೇಷ ಭಾವನೆ ಬೆಳೆಸಿಕೊಳ್ಳಲು ಇಂಬುಗೊಡುತ್ತದೆ ಎನ್ನುವುದು ಪಿಣರಾಯಿ ವಿಜಯನ್ ತಕರಾರು. ಕಾಮಾಕ್ಯ ನಾರಾಯಣ ಸಿಂಗ್ ನಿರ್ದೇಶಿಸಿರುವ ಈ ಹಿಂದಿ ಸಿನಿಮಾದಲ್ಲಿ ಮೂವರು ಹೆಣ್ಣುಮಕ್ಕಳ ಕಥನವಿದೆ. ಅವರು ಅನುಭವಿಸುವ ಯಾತನೆಯನ್ನು ಹೂರಣವಾಗಿಸಿ, ಮುಸ್ಲಿಮರ ಬಗ್ಗೆ ದ್ವೇಷ ಹುಟ್ಟುವಂತೆ ಕಥೆ ಕಟ್ಟಲಾಗಿದೆ ಎಂದು ಕೇರಳದ ಬಹುತೇಕ ರಾಜಕಾರಣಿಗಳು ಆರೋಪಿಸುತ್ತಿದ್ದಾರೆ.

ನಿರ್ಮಾಪಕ ವಿಪುಲ್‌ಶಾ ಪ್ರಕಾರ ಇದು ಸತ್ಯ ಕಥೆ ಆಧರಿಸಿದ ಸಿನಿಮಾ. ಅಜೆಂಡಾ ಇರುವ ಸಿನಿಮಾ ಹೌದೋ ಅಲ್ಲವೋ ಎಂಬ ತೀರ್ಮಾನವನ್ನು ಜನರಿಗೇ ಬಿಡಬೇಕು. ಒಂದು ಕಾಲದಲ್ಲಿ ಸಣ್ಣ ಕೆಟ್ಟ ಸಂಭಾಷಣೆ ಇದ್ದರೂ ಬೀಪ್ ಶಬ್ದ ಹಾಕುವಂತೆ ಸೂಚಿಸುತ್ತಿದ್ದ ಸೆನ್ಸಾರ್ ಮಂಡಳಿ ಈಗ ಇಂತಹ ವಸ್ತುಗಳ ಚಿತ್ರಗಳಿಗೆ ಯು/ಎ ಪ್ರಮಾಣಪತ್ರ ನೀಡುತ್ತಿದೆ. ಸಿನಿಮಾ ವ್ಯಾಕರಣ ತಿಳಿದವರು ಇದನ್ನೂ ಪ್ರಶ್ನಿಸುತ್ತಿದ್ದಾರೆ. ■



## ಶಾಹಿದ್ ಹೊಗಳಿದ ಹೃತಿಕ್

ನಟ ಹೃತಿಕ್ ರೋಷನ್ ಸಾಮಾಜಿಕ ಮಾಧ್ಯಮದಲ್ಲಿ ಶಾಹಿದ್ ಕಪೂರ್ ಅವರನ್ನು ಹೊಗಳಿ ಒಂದು ಪೋಸ್ಟ್ ಹಾಕಿದ್ದಾರೆ. ‘ಓ ರೋಮಿಯೋ’ ಸಿನಿಮಾ ನೋಡಿ ಅವರು ಈ ನಟನ ಅಭಿನಯಕ್ಕೆ ಫಿದಾ ಆಗಿದ್ದಾರೆ.

ತುಂಟತನ ಹಾಗೂ ಚೇಷ್ಟೆ ಮಾಡುವ ಪಾತ್ರಗಳಿಗೆ ಶಾಹಿದ್ ನ್ಯಾಯ ಸಲ್ಲಿಸಬಲ್ಲ ನಟ. ಚಿತ್ರವು ಬಹಳ ಮಜಾ ಕೊಟ್ಟಿತು ಎಂದು ಹೃತಿಕ್ ಶ್ಲಾಘಿಸಿದ್ದಾರೆ. ಚಿತ್ರಮಂದಿರಗಳಿಗೆ ಹೋಗಿ ಸಿನಿಮಾ ನೋಡುವಂತೆ ಜನರನ್ನೂ ಕೇಳಿಕೊಂಡಿದ್ದಾರೆ.

ವಿಶಾಲ್ ಭಾರದ್ವಾಜ್ ನಿರ್ದೇಶನದ ‘ಓ ರೋಮಿಯೋ’ ಚಿತ್ರದಲ್ಲಿ ತೃಪ್ತಿ ಡಿಮ್ರಿ, ನಾನಾ ಪಾಟೇಕರ್ ಅಭಿನಯವೂ ಇದೆ. ₹125 ಕೋಟಿ ಅಂದಾಜು ಬಜೆಟ್‌ನಲ್ಲಿ ತಯಾರಾಗಿರುವ ಚಿತ್ರ ಬಂಡವಾಳದ ಅರ್ಧಕ್ಕಿಂತ ಹೆಚ್ಚು ಹಣವನ್ನು ಗಳಿಸಿದೆ. ಅಷ್ಟೂ ಬಂಡವಾಳ ವಾಪಸ್ ಬರುವುದರಲ್ಲಿ ಅನುಮಾನ ಇಲ್ಲ ಎಂದು ಚಿತ್ರತಂಡ ಹೇಳುತ್ತಿದೆಯಾದರೂ, ಸಿನಿಮಾ ಕುರಿತು ಮಿಶ್ರ ಪ್ರತಿಕ್ರಿಯೆ ಇದೆ. ■